**Code No. 20 X**

### ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

## (ವೇಗ)

ಜನವರಿ, 2019

ವೇಳೆ { ಉಕ್ತಲೇಖನ : 10 ನಿಮಿಷಗಳು
ಲಿಪಿ ಬರಹ : 1 ಗಂಟೆ 30 ನಿಮಿಷಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರು (200) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಸನ್ಮಾನ್ಯ ಸಭಾಪತಿಯವರೇ,

ಈ ಸಾಲಿನ ರಾಜ್ಯ ಯೋಜನಾ ಗಾತ್ರದ
ಅವಧಿಯಲ್ಲಿ ಕೆಲವು ವಲಯಗಳಿಂದ ಹೆಚ್ಚುವರಿ
$\frac{1}{4}$ ಸಂಪನ್ಮೂಲಗಳಿಗೆ ಬೇಡಿಕೆ/ ಬಂದಿದ್ದರೆ, ಇತರ
ವಲಯಗಳು ನಿಧಾನಗತಿಯ ಅನುಷ್ಠಾನದ
ಕಾರಣದಿಂದಾಗಿ ಸಂಭಾವ್ಯ ಉಳಿತಾಯಗಳನ್ನು
$\frac{1}{2}$ ಮಾಡಿವೆ. ಈ ಗೌರವಾನ್ವಿತ ಸದ/ನವು
ಮೊದಲ ಎರಡು ಪೂರಕ ಅಂದಾಜುಗಳಲ್ಲಿ
ಹೆಚ್ಚುವರಿ ಯೋಜನಾ ಹಣಕಾಸು ನೆರವಿಗೆ
ಅನುಮೋದನೆ ನೀಡಿತ್ತು. ಸರ್ಕಾರವು
$\frac{3}{4}$ ಯೋಜನಾ ಹಣಕಾ/ಸು ನೆರವನ್ನು ಒಳಗೊಂಡ
ಪೂರಕ ಅಂದಾಜುಗಳ ಮೂರನೆಯ ಮತ್ತು
ಕೊನೆಯ ಕಂತಿಗೆ ಅನುಮೋದನೆಯನ್ನು
ಕೋರುತ್ತಿದೆ. ಉತ್ತಮ ತೆರಿಗೆ ಪ್ರಯತ್ನಗXಳು 1
ಮತ್ತು ಕೆಲವು ಯೋಜನೆಗಳಡಿ ಮಾಡಲಾದ
ಉಳಿತಾಯಗಳ ಮೂಲಕ ವರ್ಷಾವಧಿಯಲ್ಲಿ
ಸಂಗ್ರಹಿಸಲಾದ ಹೆಚ್ಚುವರಿ ಸಂಪನ್ಮೂಲಗಳಿಂದ
ಈ ಹೆ/ಚ್ಚುವರಿ ಅಗತ್ಯತೆಗಳನ್ನು ಭರಿಸಲಾಗಿದೆ. $\frac{1}{4}$
ಎಂದು ಹೇಳುತ್ತೇನೆ. ರಾಜ್ಯ ಆಯವ್ಯಯದಿಂದ
ಮಾಡಲಾದ ಯೋಜನಾ ವೆಚ್ಚವು ಎರಡು
ಸಾವಿರದ ಹತ್ತು ಮ/ತ್ತು ಹನ್ನೊಂದನೇ $\frac{1}{2}$
ಸಾಲಿನಲ್ಲಿ ಇದೇ ಅವಧಿಗೆ ಮಾಡಿದ್ದ ವೆಚ್ಚಕ್ಕಿಂತ
ಶೇಕಡಾ ಇಪ್ಪತರಷ್ಟು ಅಧಿಕವಾಗಿದೆ
ಒಟ್ಟಾರೆಯಾಗಿ ಹೇಳುವುದಾದರೆ ಸರ್ಕಾರ/ವು $\frac{3}{4}$

ರಾಜ್ಯ ಯೋಜನಾ ಗಾತ್ರವನ್ನು ಸಂಪೂರ್ಣವಾಗಿ
ಸಾಧಿಸುವ ನಿರೀಕ್ಷೆ ಹೊಂದಿದ್ದು, ಇದು ಕಳೆದ
ಸಾಲಿನಲ್ಲಿ ಮಾಡಿದ ಸಾಧನೆಗಿಂತ
ಅಧಿಕವಾಗಲಿದೆ.

2 ಹXನ್ನೆರಡನೇ ಪಂಚವಾರ್ಷಿಕ
ಯೋಜನೆಯು ಮುಂದಿನ ಐದು ವರ್ಷಗಳ
ಅವಧಿಯಲ್ಲಿ ಕರ್ನಾಟಕದ ಅಭಿವೃದ್ಧಿ
ಕಾರ್ಯಸೂಚಿಯ ಸಮಗ್ರ ರೇಖೆಯನ್ನು
$\frac{1}{4}$ ರೂಪಿ/ಸುತ್ತದೆ ಎಂದು ನಿರೀಕ್ಷಿಸಲಾಗಿದೆ.
ಇದರಲ್ಲಿ ತ್ವರಿತ, ಹೆಚ್ಚು ವ್ಯಾಪಕ ಮತ್ತು ಪರಿಸರ
ದೃಷ್ಟಿಯಿಂದ ಸುಸ್ಥಿರವಾದ ಬೆಳವಣಿಗೆಗಾಗಿ
$\frac{1}{2}$ ಧ್ಯೇಯೋದ್ದೇಶ/ಗಳು ಮತ್ತು ಸವಾಲುಗಳ
ಕುರಿತ ವಿಸ್ತೃತ ರಾಷ್ಟ್ರೀಯ ಒಮ್ಮತವನ್ನು
ಪ್ರತಿಬಿಂಬಿಸಬೇಕಾಗಿದೆ. ರಾಜ್ಯ ಯೋಜನಾ
$\frac{3}{4}$ ಮಂಡಳಿಯು ಹನ್ನೆರಡನೇ ಯೋಜನೆಗೆ/
ವಿಷಯ ಮಾಹಿತಿಗಳನ್ನು ಒದಗಿಸಲು
ಸರ್ಕಾರದ ಮತ್ತು ಸರ್ಕಾರೇತರ ತಜ್ಞರುಗಳನ್ನು
ಒಳಗೊಂಡ ಕಾರ್ಯನಿರತ ತಂಡಗಳ
3 ಮುಖಾಂತರ ಪ್ರಮುXಖ ವಲಯಗಳಾಗಿ
ವಿವರವಾದ ವರದಿಗಳನ್ನು ಸಿದ್ಧಪಡಿಸಲಾಗಿದೆ
ಎಂದು ಹೇಳುತ್ತೇನೆ.

ಈ ಯೋಜನೆಯಲ್ಲಿ ಐದು ವಲಯಗಳು
ಅಂದರೆ, ನೀರಾ/ವರಿ, ಸಾರಿಗೆ, ವಿದ್ಯುತ್, $\frac{1}{4}$
ನಗರಾಭಿವೃದ್ಧಿ ಮತ್ತು ಶಿಕ್ಷಣದ ಮೇಲೆ
ಬಂಡವಾಳ ಹೂಡಿಕೆಯ ಕೇಂದ್ರೀಕರಣವನ್ನು
ಮಾಡಲಾಗಿದ್ದು, ಕಾರ್ಯನಿರತ ತಂಡಗ/ಳ $\frac{1}{2}$
ಶಿಫಾರಸ್ಸುಗಳು ಮತ್ತು ಭಾಗಿದಾರರೊಂದಿಗೆ
ನಡೆಸಿದ ಸಮಾಲೋಚನೆಗಳನ್ನು ಪರಿಶೀಲಿಸಿದ
ನಂತರ ಈ ಯೋಜನೆಯ ಆದ್ಯತೆಗಳನ್ನು
ಅಂತಿ/ಮಗೊಳಿಸಲಾಗುವುದು. $\frac{3}{4}$

ಜಾಗತಿಕ ಮತ್ತು ರಾಷ್ಟ್ರೀಯ
ಸವಾಲುಗಳೇನೇ ಇದ್ದರೂ, ಈ ಆಯವ್ಯಯದ
ಮೂಲಕ ಉತ್ತಮ ಅಭಿವೃದ್ಧಿಯನ್ನು
ಸಾಧಿಸುವುದಲ್ಲXದೇ ಸಮಗ್ರ ವೃದ್ಧಿಯನ್ನು ಸಹ 4
ಸಾಧಿಸಲು ಉದ್ದೇಶಿಸಿದ್ದೇವೆ ಎಂದು ಹೇಳಲು
ಇಚ್ಛಿಸುತ್ತೇನೆ. ಇದನ್ನು ನಾವು ವಿವಿಧ
ಉಪಕ್ರಮಗಳ ಮೂಲಕ ಸಾಧಿಸು/ತ್ತೇವೆ. $\frac{1}{4}$
ಈ ಪ್ರಸ್ತಾವನೆಗಳಲ್ಲಿ ಶಿಕ್ಷಣ, ಆರೋಗ್ಯ,
ಕುಡಿಯುವ ನೀರಿನ ಪೂರೈಕೆ ಮತ್ತು ಸಮಾಜ
ಕಲ್ಯಾಣ ವಲಯಗಳಲ್ಲಿ ಬಂಡವಾಳವನ್ನು
ಹೂಡುವ ಮೂ/ಲಕ ಮಾನವ $\frac{1}{2}$
ಸಂಪನ್ಮೂಲಗಳನ್ನು ಬಲಪಡಿಸುವುದೂ
ಸೇರಿದೆ. ಅಲ್ಲದೇ, ಇಂಧನ, ರಸ್ತೆಗಳು,
ಬಂದರುಗಳು, ವಸತಿ, ಕೌಶಲ್ಯ ಅಭಿವೃದ್ಧಿ,

$\frac{3}{4}$ ವ್ಯಾಪಾರ/ ಮತ್ತು ಕೈಗಾರಿಕಾ ಅಭಿವೃದ್ಧಿಯ
ಕ್ಷೇತ್ರಗಳಲ್ಲಿ ಮೂಲಸೌಕರ್ಯ ಹೂಡಿಕೆಗಳನ್ನು
ಮಾಡುವ ಮೂಲಕ ಭೌತಿಕ ಬಂಡವಾಳವನ್ನೂ
5 ಸಹ ಬಲಪಡಿಸುತ್ತೇXವೆ.

ಸರ್ಕಾರವು ನಿರ್ವಹಿಸಬೇಕಾದ ಬೃಹತ್
ಕೆಲಸ–ಕಾರ್ಯಗಳನ್ನು ಅವವ್ಯಯದ
ಮಿತಿಯನ್ನು ಮಾಡಲು ಸಾಧ್ಯವಿಲ್ಲ.
$\frac{1}{4}$ ಸಾರ್ವಜನಿಕ ಖಾಸಗಿ ಸಹಭಾ/ಗಿತ್ವದ
ರೂಪದಲ್ಲಿ ಬಂಡವಾಳದ ಅನುಕೂಲವನ್ನು
ಪಡೆಯುವುದು ಸಹ ಅಗತ್ಯವಿದೆ. ಈ ರೀತಿಯ
$\frac{1}{2}$ ಹೂಡಿಕೆಗಳಲ್ಲಿ ಸ್ವಲ್ಪ ಮಟ್ಟಿಗೆ ಪ್ರಗತಿಯನ್ನು/
ನಾವು ಸಾಧಿಸಿದ್ದೇವೆ. ಕರ್ನಾಟಕವು ವಾಣಿಜ್ಯ
ಬ್ಯಾಂಕ್‌ಗಳ ಮತ್ತು ಅದರ ಶಾಖೆಗಳ ಬೃಹತ್
ಜಾಲವನ್ನು ಹೊಂದಿದೆ. ನಾವು, ರಾಜ್ಯ ಮಟ್ಟದ
$\frac{3}{4}$ ಬ್ಯಾಂಕರ್‌ಗಳ/ ಸಮಿತಿ ವೇದಿಕೆಯ ಮೂಲಕ
ಬ್ಯಾಂಕಿಂಗ್ ವಲಯವನ್ನು ನಿರಂತರವಾಗಿ
ಪರಿಶೀಲನೆ ಮತ್ತು ಮೇಲ್ವಿಚಾರಣೆಗೆ
6 ಒಳಪಡಿಸುವ ಮೂಲಕ ವಾಣಿಜ್ಯ ಬ್ಯಾಂXಕಿಂಗ್
ಸಂಪರ್ಕವನ್ನು ಬಳಸಿಕೊಳ್ಳಲು ಬಯಸುತ್ತೇವೆ.
ಜೊತೆಗೆ ಹಿಂದಿನಂತೆ ಬಹುಪಕ್ಷೀಯ
ಹಣಕಾಸು ಸಂಸ್ಥೆಗಳ ಮೂಲಕ ಕಡಿಮೆ ದರದ
$\frac{1}{4}$ ಸಾಲವ/ನ್ನು ಪಡೆಯಲಾಗುವುದು.

ಸಮಗ್ರ ಆರ್ಥಿಕ ಬೆಳವಣಿಗೆಗೆ ಅನುವು
ಮಾಡಿಕೊಡುವ ಸಲುವಾಗಿ ಕೈಗೆಟುಕುವ
ಬೆಲೆಗಳಲ್ಲಿ ಸಮರ್ಪಕ ವಿದ್ಯುಚ್ಛಕ್ತಿ/ $\frac{1}{2}$
ಪೂರೈಕೆಯನ್ನು ಖಚಿತಪಡಿಸುವುದು ರಾಜ್ಯ
ಸರ್ಕಾರ ಎದುರಿಸುತ್ತಿರುವ ಒಂದು ಪ್ರಮುಖ
ಸವಾಲಿಗಿದೆ. ವಿದ್ಯುಚ್ಛಕ್ತಿಯ ಬಳಕೆಯು
ಇತ್ತೀಚಿನ ವರ್ಷ/ಗಳಲ್ಲಿ ಅತ್ಯಂತ $\frac{3}{4}$
ಗಣನೀಯವಾಗಿ ಹೆಚ್ಚುತ್ತಿದ್ದು, ಇದು
ವಿದ್ಯುಚ್ಛಕ್ತಿಯ ಬೇಡಿಕೆಯ ಮತ್ತು ಪೂರೈಕೆಯ
ನಡುವಿನ ಅಂತರದ ಮೇಲೆ ಒತ್ತಡ
ಹೇರುತ್ತಿದೆ.X 7

ಸ್ವಾಮಿ,

ಸರ್ಕಾರಿ ಹುದ್ದೆಗಳ ನೇಮಕಕ್ಕೆ
ನಿಗದಿಪಡಿಸಿರುವ ವಯೋಮಿತಿ ಹೆಚ್ಚಳ
ವಿಚಾರದಲ್ಲಿ ನೆರೆ ರಾಜ್ಯಗಳ ಮಾದರಿ
ಅಳವಡಿಸಿಕೊಳ್ಳುವ/ ಉದ್ಯೋಗಾಕಾಂಕ್ಷಿಗಳ $\frac{1}{4}$
ಮನವಿಗೆ ಸರ್ಕಾರ ಇನ್ನೂ ಸ್ಪಂದಿಸಿಲ್ಲ.

ಹಿಂದಿನ ಸರ್ಕಾರದ ಕೊನೆಯಲ್ಲಿ
ನಿರ್ಧಾರ ಕೈಗೊಳ್ಳಲು ವಿಧಾನಸಭೆ ಚುನಾವಣೆ
ಅ/ಡ್ಡಿಯಾಗಿತ್ತು. ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ $\frac{1}{2}$
ಬರುತ್ತಿದ್ದಂತೆ ಮುಖ್ಯಮಂತ್ರಿಗಳಿಗೆ ಹೊಸ
ಪ್ರಸ್ತಾಪ ಸಲ್ಲಿಸಲಾಗಿದೆ. ಇದನ್ನು ಪರಿಶೀಲಿಸಿ,
ನಿರ್ಧಾರ ತಿ/ಳಿಸುವಂತೆ ಮುಖ್ಯಮಂತ್ರಿಗಳೂ $\frac{3}{4}$

ಸೂಚಿಸಿದ್ದರೂ, ಸಿಬ್ಬಂದಿ ಮತ್ತು ಆಡಳಿತ
ಸುಧಾರಣಾ ಇಲಾಖೆ ಈವರೆಗೂ ತನ್ನ
ತೀರ್ಮಾನವನ್ನು ವ್ಯಕ್ತಪಡಿಸಿಲ್ಲ.

8 ರಾಜ್ಯXದಲ್ಲಿ ಸರ್ಕಾರಿ ಕೆಲಸಕ್ಕೆ ಸೇರಲು
ಸಾಮಾನ್ಯ ಅಭ್ಯರ್ಥಿಗೆ ಮೂವತ್ತೈದು ವರ್ಷ
ನಿಗದಿಪಡಿಸಲಾಗಿದೆ. ಹಿಂದುಳಿದ ವರ್ಗ
$\frac{1}{4}$ ಪ್ರವರ್ಗ–ಒಂದಕ್ಕೆ ಮೂವತ್ತೆಂ/ಟು ಹಾಗೂ
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ
ಅಭ್ಯರ್ಥಿಗಳಿಗೆ ನಲವತ್ತು ವರ್ಷ ಮಿತಿ ಇದೆ.
$\frac{1}{2}$ ಇತ್ತೀಚಿನ ವರ್ಷಗಳಲ್ಲಿ ಪತ್ರಾಂಕಿತ ಹುದ್ದೆಗ/ಳ
ಸಹಿತ ನಾನಾ ಇಲಾಖೆಗಳಲ್ಲಿ ನೇಮಕ
ಪ್ರಕ್ರಿಯೆ ನಿರಂತರವಾಗಿ ನಡೆಯುವ ಕಾರಣ
ಉದ್ಯೋಗಾಕಾಂಕ್ಷಿಗಳಿಂದ ವಯೋಮಿತಿ
$\frac{3}{4}$ ಹೆಚ್ಚಿಸುವ ಒತ್ತಾಯ/ ಕೇಳಿ ಬಂದಿದೆ.

ಎರಡು ಸಾವಿರದ ಹನ್ನೊಂದರಿಂದ
ಹದಿನೆಂಟರವರೆಗೆ ಎರಡು ಬಾರಿ ಮಾತ್ರ
ಹಿರಿಯ ಅಧಿಕಾರಿಗಳ ಹುದ್ದೆಗಳಿಗೆ ಪರೀಕ್ಷೆ
ನXಡಿದಿದೆ. ಇತರ ಇಲಾಖೆಗಳಲ್ಲೂ ಮಿತವ್ಯಯ 9
ಕಾರಣ ನಿರೀಕ್ಷಿತ ಮಟ್ಟದಲ್ಲಿ ನೇಮಕ ಆಗಿಲ್ಲ.
ಬರೋಬ್ಬರಿ ಒಂದು ಲಕ್ಷ ಐವತ್ತು ಸಾವಿರಕ್ಕೂ
ಹೆಚ್ಚು/ ಹುದ್ದೆಗಳು ಖಾಲಿಯಿರುವಾಗ $\frac{1}{4}$
ಅರ್ಧದಷ್ಟು ಭರ್ತಿ ಮಾಡಿಕೊಳ್ಳಲು
ಸರ್ಕಾರಕ್ಕಿರುವ ಅಡ್ಡಿಯಾದರೂ ಏನು ಎಂಬ
ಪ್ರಶ್ನೆ ರಾಜ್ಯದೆಲ್ಲೆಡೆ ಕೇಳಿಬರುತ್ತಿದೆ.

ಈ/ ವಿಚಾರವಾಗಿ ಸಿಬ್ಬಂದಿ ಮತ್ತು $\frac{1}{2}$
ಆಡಳಿತ ಸುಧಾರಣಾ ಇಲಾಖೆ ಅಧಿಕಾರಿಗಳನ್ನು
ಸಂಪರ್ಕಿಸಿದಾಗ 'ವಯೋಮಿತಿ ಹೆಚ್ಚಳ
ಪ್ರಸ್ತಾಪವನ್ನು ಪರಿಶೀ/ಲಿಸಿದ್ದು, ಇನ್ನೂ $\frac{3}{4}$
ನಿರ್ಧಾರ ಕೈಗೊಂಡಿಲ್ಲ. ಸರ್ಕಾರದಿಂದ ಸೂಚನೆ
ಬಂದಲ್ಲಿ ಮತ್ತೊಮ್ಮೆ ಪರಿಶೀಲನೆಯನ್ನು
ನಡೆಸಲು ಸಿದ್ದ' ಎಂಬ ಪ್ರತಿಕ್ರಿಯೆ
ವ್ಯಕ್ತವಾಗಿದೆ.X 10